## ‘ಜೊತೆ ಜೊತೆಯಲಿ’ ದಾರಿಯಲ್ಲಿ ‘ಗಟ್ಟಿಮೇಳ’

ಧಾರಾವಾಹಿ ಇತಿಹಾಸದಲ್ಲಿ ಮೊದಲ ಬಾರಿಗೆ ಹೆಲಿಕಾಪ್ಟರ್ ಬಳಸಿ ಚಿತ್ರೀಕರಣ ನಡೆಸಿದ ಧಾರಾವಾಹಿ ಝೀ ಕನ್ನಡದ ‘ಜೊತೆ ಜೊತೆಯಲಿ’. ಭರ್ಜರಿ ಪ್ರಾರಂಭ ಪಡೆದ ಈ ಧಾರಾವಾಹಿ ನೋಡುಗರ ಮೆಚ್ಚುಗೆಯನ್ನೂ ಪಡೆದಿತ್ತು. ಕಥೆಯ ನಿರೂಪಣೆಯಲ್ಲಿ ಪ್ರತಿ ಪಾತ್ರಗಳಿಗೂ ಆರಂಭದಲ್ಲಿ ಪ್ರಾಧಾನ್ಯತೆ ನೀಡಲಾಗಿತ್ತು. ಎರಡು ಮೂರು ವರ್ಷಗಳು ಕಳೆದ ಮೇಲೆ ನಾಯಕ ಪಾತ್ರಧಾರಿಯ ನಿರ್ಗಮನವಾಯಿತು. ಅದರೊಂದಿಗೆ ಧಾರಾವಾಹಿಯೂ ತನ್ನ ಮಹತ್ವವನ್ನು ಕಳೆದುಕೊಂಡಿತು. ಈಗ ಅದೇ ಹಾದಿಯಲ್ಲಿ ‘ಗಟ್ಟಿಮೇಳ’ ಸಾಗುತ್ತಿದೆ ಎಂದೆನಿಸುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಭಾಷೆಯ ಮರ್ಯಾದೆ ಕೆಡಿಸದಿರಿ...

ಸುದ್ದಿ ವಾಹಿನಿಗಳು ಸುದ್ದಿಯನ್ನು ಆಕರ್ಷಕ ಮಾಡಲು ಆಲಂಕಾರಿಕ ಶಬ್ದಗಳು ಮತ್ತು ಬಿರುದು ಬಾವಲಿಗಳನ್ನು ಯದ್ವಾತದ್ವಾ ಬಳಸುತ್ತವೆ. ಸೆಲೆಬ್ರಿಟಿ ಇರಲಿ, ಕ್ರಿಮಿನಲ್‌ಗಳೇ ಇರಲಿ, ಕ್ಷಣ ಮಾತ್ರದಲ್ಲೇ ಬೇಕಾದ ಬಿರುದನ್ನು ದಯಪಾಲಿಸುತ್ತಾರೆ. ಕೆಲವು ಸಂದರ್ಭದಲ್ಲಿ ಈ ರೀತಿ ಮಾಡುವ ಅನಿವಾರ್ಯತೆ ಇರಬಹುದು. ಆದರೆ, ಇದನ್ನೇ ಅಗತ್ಯ ಅಂಶ ಎನ್ನುವಂತೆ ಅತಿಯಾಗಿ ಬಳಕೆ ಮಾಡುತ್ತಿರುವುದು ವೀಕ್ಷಕರಿಗೆ ರೇಜಿಗೆ ಹುಟ್ಟಿಸುತ್ತದೆ. ಬಿರುದು ನೀಡುತ್ತಾರೋ ಅಲಂಕಾರ ಮಾಡುತ್ತಾರೋ ಯಾವುದಕ್ಕೂ ಒಂದು ಇತಿ ಮಿತಿ ಇದ್ದರೆ ಅದರ ವರ್ಚಸ್ಸು ಹೆಚ್ಚಾಗುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ‘ಭಗವಂತ’ನ ಒಳ್ಳೆಯ ಕೆಲಸ

ಝೀ ಕನ್ನಡದ ‘ಭೂಮಿಗೆ ಬಂದ ಭಗವಂತ’ ಧಾರಾವಾಹಿಯಲ್ಲಿ ಒಂದರ ನಂತರ ಒಂದರಂತೆ ನೀತಿಪಾಠ ಹಾಗೂ ಸಮಾಜಮುಖಿ ಮಾಹಿತಿಯನ್ನು ಭಗವಂತನ ಮೂಲಕ ಹೇಳಿಸಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ.

ಇತ್ತೀಚೆಗೆ ಮಾರುತಿಯ ಮೂರ್ತಿಗೆ ಹಾಲು ಕುಡಿಸುವ ಪ್ರಸಂಗ ತುಂಬಾ ಮಾರ್ಮಿಕವಾಗಿ ಮೂಡಿಬಂದಿದೆ. ಗಿರಿಜಾ ಅವರ ಕನಸಿನಲ್ಲಿ ಹಸಿದ ಬಾಲಕ ಬಂದು ‘ಹಸಿವಾಗಿದೆ ಹಾಲು ಕೊಡಿ’ ಎಂದು ಕೇಳುತ್ತಾನೆ. ಆದರೆ ಅವನಿಗೆ ಹಾಲು ಕೊಡದೇ ಮನೆಗೆ ಬಂದ ಬಾಲಹನುಮನಿಗೆ ಹಾಲು ಖಾಲಿಯಾಗುವವರೆಗೆ ಕೊಡುತ್ತಾಳೆ. ಮಾರನೆಯ ದಿನ ಹನುಮಪ್ಪನ ಗುಡಿಗೆ ಹೋಗಿ ಹನುಮಪ್ಪನಿಗೆ ಹಸಿವಾಗಿದೆ, ಹಾಲು ಕುಡಿಸಿರೆಂದು ಹೇಳುತ್ತಾಳೆ. ಅದರಿಂದಾಗಿ ದಿನಕ್ಕೆ ನೂರಾರು ಲೀಟರ್ ಹಾಲು ಹಾಳು ಮಾಡುತ್ತಾರೆ. ಕೊನೆಯಲ್ಲಿ ಭಗವಂತ ಬಂದು ನಿಜವಾಗಿ ಹಸಿವಾದವರಿಗೆ ಹಸಿವು ನೀಗಿಸಲು ಹೇಳುತ್ತಾನೆ. ಇದನ್ನು ನೋಡಿದಾಗ ಎರಡು ದಶಕದ ಹಿಂದೆ ಗಣಪತಿಗೆ ಹಾಲು ಕುಡಿಸಿದ ಪ್ರಸಂಗ ನೆನಪಾಯಿತು. ಈ ಕಾರಣಕ್ಕೆ ಇತರೆ ಧಾರಾವಾಹಿಗಳಿಗಿಂತ ಇದು ಭಿನ್ನ ಎಂದು ಅನ್ನಿಸುತ್ತದೆ.

—ಪಿ.ಹೆಚ್. ಪಾಟೀಲ, ರಾಣೆಬೆನ್ನೂರು

ವಾರದ ಪತ್ರ

## ಮನ ಕದ್ದ ಚಹಾ ಸ್ವಾದ

ಧಾರಾವಾಹಿಗಳನ್ನು ನೋಡುವಾಗ ನಡುನಡುವೆ ಬರುವ ಜಾಹೀರಾತುಗಳು ಊಟದ ನಡುವೆ ಸಿಗುವ ಕಲ್ಲಿನಂತೆ ಭಾಸವಾಗುತ್ತವೆ. ಆಗ ಕಲ್ಲನ್ನು ಎತ್ತಿ ಮೆಲ್ಲುವಂತೆ, ಜಾಹೀರಾತು ಬಂದ ತಕ್ಷಣ ಚಾನಲ್ ಬದಲಾಯಿಸಿ, ಬೇರೆ ಚಾನಲ್ ನೋಡಲು ಶುರು ಮಾಡುತ್ತೇವೆ. ಆದರೆ ಜಾಹೀರಾತನ್ನೂ ಆಕ್ತಿಯಿಂದ ನೋಡುವಂತೆ ಮಾಡಲು ಸಾಧ್ಯ ಎನ್ನುವುದಕ್ಕೆ ಒಂದು ಉದಾಹರಣೆ.

ಅನಾರೋಗ್ಯ ಪೀಡಿತ ತಂದೆಯನ್ನು ಆಸ್ಪತ್ರೆಗೆ ದಾಖಲು ಮಾಡಿದ ಯುವಕ ಹೊರಗೆ ಬಂದು ಬೇಸರದಿಂದ ಕುಳಿತಿದ್ದಾನೆ. ಆಗ ಅಲ್ಲಿಗೆ ಒಬ್ಬ ಹಿರಿಯ ಮಹಿಳೆ ಮನೆಯಿಂದ ಟೀ ತೆಗೆದುಕೊಂಡು ಬಂದು ಕೊಡುತ್ತಾಳೆ. ‘ನಿಮ್ಮವರು ಇಲ್ಲಿ ಯಾರಿದ್ದಾರೆ’ ಎಂದು ಆ ಯುವಕ ಕೇಳಿದಾಗ ಆಕೆ, ‘ನಮ್ಮವರು ಯಾರೂ ಇಲ್ಲ. ಇಲ್ಲಿಗೆ ಬಂದು ಕುಳಿತವರು ಒಬ್ಬಂಟಿ ಅಂತ ಅನಿಸುತ್ತದೆ.

ನನ್ನ ಮನೆ ಇಲ್ಲೇ ಎದುರಿನಲ್ಲಿದೆ. ಅದಕ್ಕೆ ಟೀ ತಂದು ಅವರಿಗೂ ಕೊಟ್ಟು, ನಾನೂ ಅವರ ಜೊತೆ ಕುಡಿಯುತ್ತೇನೆ’ ಎಂದು ಹೇಳುತ್ತಾಳೆ. ಎಂಥ ಹೃದಯಸ್ಪರ್ಶಿ ಮಾತು. ಎಂದೂ ಕಾಡುವ ಜಾಹೀರಾತು ಇದು. ನೋಡಿದ ಎಂಥವರಿಗೂ ಮನಸ್ಸು ಕರಗಿಹೋಗಬೇಕು. ಬೇರೆ ಜಾಹೀರಾತಿನ ವಸ್ತುಗಳಿಗೂ, ತೋರಿಸುವ ದೃಶ್ಯ, ಆಡುವ ಮಾತುಗಳಿಗೂ ಸಂಬಂಧವೇ ಇಲ್ಲದಿರುವಾಗ ಇಂಥ ಜಾಹೀರಾತುಗಳು ಮನ ಸೆಳೆಯುವುದರಲ್ಲಿ ಆಶ್ಚರ್ಯವೇ ಇಲ್ಲ.

—ಮನೋಜ್ ಕುಮಾರ್ ಕೆ., ಬೆಂಗಳೂರು

## ಕ್ರೌರ್ಯವೇ ನಿತ್ಯದ ಕಥೆಯಾದರೆ ಹೇಗೆ?

ಕಲರ್ಸ್ ಕನ್ನಡದ ‘ಗೀತಾ’ ಧಾರಾವಾಹಿಯ ಕಥೆಯಲ್ಲಿ ಕ್ರೌರ್ಯ, ಹತ್ಯೆಗಳೇ ತುಂಬಿವೆ. ಅಪರಾಧಿಗಳಿಗೆ ಗೆಲುವು ಸಿಗುತ್ತಿರುವುದು ಬೇಸರ ಹುಟ್ಟಿಸುತ್ತಿದೆ. ಸತ್ಯವಂತರು ಸದಾ ತೊಂದರೆಗೆ ಸಿಲುಕುತ್ತಾರೆ. ಸಜ್ಜನರಿಗೆ ಜೈಲು, ಆಸ್ಪತ್ರೆಯವಾಸ ಪುನರಾವರ್ತನೆಯಾಗುತ್ತಿದೆ. ಈ ಧಾರಾವಾಹಿಯ ಕಥಾಹಂದರಕ್ಕೆ ಕ್ರೌರ್ಯವೇ ಮುಖ್ಯ ಎನ್ನುವುದಾದರೆ ಇದನ್ನು ಕೂಡಲೇ ಮುಗಿಸಿಬಿಡಿ. ‘ಅಂತರಪಟ’, ‘ರಾಮಾಚಾರಿ’ ಧಾರಾವಾಹಿಗಳು ಕುತೂಹಲ ಹುಟ್ಟಿಸುತ್ತಿವೆ.

—ವಾಸುದೇವ, ಹಾಸನ

## ಕಾಗುಣಿತದ ತಪ್ಪುಗಳ ಕಿರಿಕಿರಿ

‘ಮದ್ಯಪಾನ ವಿಮುಕ್ತಿ ಕೇಂದ್ರ, ಬೆಂಗಳೂರು’ ಎಂಬ ಫಲಕ ಕಲರ್ಸ್ ಕನ್ನಡದ ‘ಅಂತರಪಟ’ ಧಾರಾವಾಹಿಯ ಒಂದು ದೃಶ್ಯ. ಮಧ್ಯ ಎಂದರೆ ನಡುವೆ ಎಂಬ ಅರ್ಥ. ನಡು ರಸ್ತೆ, ಕಾಡಿನ ಮಧ್ಯೆ ಎಂಬಲ್ಲಿ ಈ ಪದವನ್ನು ಉಪಯೋಗಿಸುತ್ತಾರೆ. ಕುಡಿಯುವ ಮದ್ಯಕ್ಕೂ ಮಧ್ಯಕ್ಕೂ ನಡುವೆ ಸಾಗರದಷ್ಟು ವ್ಯತ್ಯಾಸವಿದೆ. ಧಾರಾವಾಹಿಯಲ್ಲಿ ‘ದ’ಕ್ಕೆ ಬಾಲ ಕೊಟ್ಟು, ಅರ್ಥವನ್ನೇ ಅಪಾರ್ಥಗೊಳಿಸಿಬಿಟ್ಟಿದ್ದಾರೆ. ಕನ್ನಡ ವಾಹಿನಿಗಳಲ್ಲಿ ಹೀಗೆ ಕನ್ನಡವನ್ನು ತಪ್ಪಾಗಿ ಬರೆದರೆ ಹೇಗೆ? ಫಲಕವನ್ನು ಕನ್ನಡ ಬಲ್ಲವರಿಗೆ ತೋರಿಸಿ ಹಾಕಬಹುದಾಗಿತ್ತಲ್ಲವೇ?

—ಪುಷ್ಪ ಎನ್.ಕೆ. ರಾವ್, ಉಡುಪಿ

## ಕಾವೇರಿಯ ಕನ್ನಡ ಪ್ರೀತಿ ಸಾಬೀತಾಗಲಿ

ಸ್ಟಾರ್ ಸುವರ್ಣದ ‘ಕಾವೇರಿ ಕನ್ನಡ ಮೀಡಿಯಂ’ ಧಾರಾವಾಹಿಯಲ್ಲಿ ಕನ್ನಡವನ್ನು ಉಳಿಸಿ, ಬೆಳೆಸಲು ಹೊರಟಿರುವ ಕಾವೇರಿ ತನ್ನ ಅಪ್ಪನನ್ನು ಪಪ್ಪಾ ಎಂದು ಕರೆಯುವುದು ಸೂಕ್ತವೆನ್ನಿಸಲಿಲ್ಲ. ಪಪ್ಪ ಎನ್ನುವುದು ಕನ್ನಡದ ಜಾಯಮಾನಕ್ಕೆ ಒಗ್ಗುವುದಿಲ್ಲ. ಕಾವೇರಿಯ ಉಚ್ಚಾರಣೆ ಇಂಗ್ಲಿಷಿನ ಅಪಭ್ರಂಶದಂತೆ ಕೇಳುತ್ತಿದೆ. ಅಚ್ಚ

—ಉಷಾರಾಣಿ, ಬೆಂಗಳೂರು

## ಅತಿರೇಕಗಳಿಗೂ ಇರಬೇಕು ಮಿತಿ

‘ಸುಳ್ಳು ಹೇಳಿದರೂ ಸತ್ಯದ ತಲೆಯ ಮೇಲೆ ಹೊಡೆದ ಹಾಗಿರಬೇಕು’ ಎಂಬುದು ಬಳಕೆಯಲ್ಲಿರುವ ಒಂದು ಮಾತು. ಕಲರ್ಸ್ ಕನ್ನಡದ ‘ರಾಮಾಚಾರಿ’ ಧಾರಾವಾಹಿ ನೋಡುತ್ತಿದ್ದರೆ ಆ ಮಾತು ಮತ್ತೆ ನೆನಪಾಗುತ್ತದೆ. ಒಂದಲ್ಲಾ ಎರಡಲ್ಲ ಪ್ರತೀ ಸಂಚಿಕೆಯಲ್ಲಿಯೂ ಅದು ಗೋಚರಿಸುತ್ತದೆ. ಅಂದರೆ ಅಷ್ಟು ಮೂರ್ಖತನದಲ್ಲಿ ಸುಳ್ಳನ್ನು ಪ್ರತಿಪಾದಿಸುತ್ತಾರೆ. ನಾಯಕಿ ತನ್ನ ಮಾವನ ಧ್ವನಿ ಅನುಕರಿಸಿ ಫೋನ್ ಮಾಡುವ ಕುತಂತ್ರ, ಅದನ್ನೇ ನಂಬುವ ರಾಮಾಚಾರಿಯ ಕುಟುಂಬ! ಮತ್ತೊಂದು ಕಡೆ ವಿಚಿತ್ರ ರೀತಿಯ ಉಡುಗೆ, ಅಲಂಕಾರ ಮಾಡಿಕೊಂಡು ದರ್ಪ ತೋರಿಸುವ ನಾಯಕಿಯ ಅಮ್ಮ, ಬಫೂನ್ ರೀತಿ ವೇಷ ತೊಟ್ಟು ಕುಣಿಯುವ ಬಾಸು! ಧಾರಾವಾಹಿಯ ತುಂಬಾ ಅತಿರೇಕಗಳೇ ತುಂಬಿಕೊಂಡರೆ ಹೇಗೆ?

—ಆರ್. ವೀರೇಶ್ ಕುಮಾರ್, ಬೆಂಗಳೂರು